ಹೆಸರಿನೊಂದಿಗೆ ಸಿಡ್ನಿಯನ್ನು ಅಂಟಿಸಿಕೊಂಡಿರುವ ಬೆಂಗಳೂರು ಮೂಲದ ಶ್ರೀನಿವಾಸ್, ಸಿಡ್ನಿ ವಿಶ್ವವಿದ್ಯಾಲಯದ 'ಏರೋಸ್ಪೇಸ್ ಅಂಡ್ ಮೆಕ್ಯಾನಿಕಲ್ ಎಂಜಿನಿಯರಿಂಗ್' ವಿಭಾಗದಲ್ಲಿ ಕೆಲಸ ಮಾಡಿ ನಿವೃತ್ತರಾದವರು. ಸದ್ಯಕ್ಕೆ ಆಸ್ಟ್ರೇಲಿಯಾ ನಿವಾಸಿ. ವಿಶ್ವವಿಖ್ಯಾತ 'ಶ್ರೀನಿವಾಸ ರಾಮಾನುಜನ್', 'ಗೆಲಿಲಿಯೊ', 'ನ್ಯೂಟನ್', 'ಅಲ್ಬರ್ಟ್ ಐನ್‌ಸ್ಟೈನ್' ಕುರಿತ ಅವರ ಪುಸ್ತಕಗಳು ಕನ್ನಡ–ಇಂಗ್ಲಿಷ್‌ನಲ್ಲಿ ಪ್ರಕಟವಾಗಿವೆ. 'ಅಳಿಯಲಾರದ ನೆನಹು' ಪ್ರಕಟಿತ ಕಥಾಸಂಕಲನ.

ಒಂದು ವಾರವಾಗಿರಲಿಲ್ಲ. ಟರ್ನರ್ ನಯನಾಳಿಗೆ ಫೋನ್ ಮಾಡಿ ಆದಷ್ಟು ಬೇಗ ಸಂದರ್ಶನಕ್ಕೆ ಬರಬೇಕೆಂದು ಕರೆದ. ಇವಳ ಸಂತೋಷಕ್ಕೆ ಪಾರವೇ ಇಲ್ಲ. ಮೊದಲ ಕರೆಯಲ್ಲಿಯೇ ಸಂದರ್ಶನದ ವ್ಯವಸ್ಥೆಯಾಯಿತು.

ತನ್ನ ಕೆಂಪು ಸೂಟ್ ಧರಿಸಿ, ತಲೆಗೂದಲಿಗೆ ಸೂಕ್ತ ಡ್ರೆಸಿಂಗ್ ಮಾಡಿಸಿ, ಯಾರಾದರೂ ಜೊಲ್ಲು ಸುರಿಸುವಂತೆ ಮೇಕಪ್ ಮಾಡಿಕೊಂಡು ಟರ್ನರ್‌ನ ಪ್ರಯೋಗಾಲಯಕ್ಕೆ ಧಾವಿಸಿದಳು. ಇಂತಹ ಹುದ್ದೆಗಳಿಗೆ ಅಭ್ಯರ್ಥಿಗಳನ್ನು ಆರಿಸಲು ಯಾವ ಕಮಿಟಿಯ ಅವಶ್ಯಕತೆಯೂ ಇರುವುದಿಲ್ಲ. ಪ್ರಾಜೆಕ್ಟಿನ ಹಣದ ವಿನಿಮಯದ ಜವಾಬ್ದಾರಿ ಮುಖ್ಯಸ್ಥನದು. ಆತ ಅಥವಾ ಆಕೆ ಯಾರನ್ನಾದರೂ ಸಹಾಯಕ್ಕೆ ನೇಮಿಸಿಕೊಳ್ಳಬಹುದು. ಕನಿಷ್ಠ ವೇತನ ನೀಡಿದರೆ ಸರಿ. ಹೆಚ್ಚಿನ ನಿರ್ಬಂಧ ಇರುವುದಿಲ್ಲ. ನಯನಾಳ ಟ್ರಾಕ್ ರೆಕಾರ್ಡ್ ಕೇಳಲೇ ಬೇಕಾಗಿಲ್ಲ. ಅದ್ಭುತವಾಗಿತ್ತು. ಟರ್ನರ್ ಮತ್ತು ಅವನ ಬಹುದಿನಗಳ ಖಾಯಂ ಸಹಾಯಕಿ ಸ್ಟೆಲ್ಲಾ ಸಂದರ್ಶನ ನಡೆಸಿ ಅವಳಿಗೆ ಪ್ರಯೋಗಾಲಯದ ಪರಿಚಯ ಮಾಡಿಸಿದರು. ಅಲ್ಲದೆ ಸ್ಥಳದಲ್ಲಿಯೇ ಅವಳನ್ನು ನೇಮಿಸಿಕೊಳ್ಳಲಾಯಿತು. ವರ್ಷಕ್ಕೆ 60,000 ಡಾಲರ್ ಸಂಬಳ.

ಸುದ್ದಿ ಕೇಳಿ ಅವಳ ತಂದೆ ತಾಯಿ ಹೆಮ್ಮೆಪಟ್ಟರು. ಆದರೂ ಅವಳು ಮದುವೆಯಾಗಿದ್ದರೆ ಮತ್ತಷ್ಟು ಸಂತೋಷ ಪಡುತ್ತಿದ್ದರು.

ಕೆಲಸ ಪ್ರಾರಂಭಿಸಿದ ಮೊದಲ ದಿನ ಟರ್ನರ್ ತಿಳಿಸಿದ - ನಿನ್ನ ನಿತ್ಯಗೆಲಸದ ಮೇಲ್ವಿಚಾರಣೆ ಸ್ಟೆಲ್ಲಾ ಅವರದ್ದು. ನಾನು ವಾರಕ್ಕೆ ಒಮ್ಮೆಯೊ ಅಥವಾ ಎರಡು ವಾರಕ್ಕೆ ಒಮ್ಮೆಯೋ ನಿನ್ನನ್ನು ನೋಡುತ್ತೇನೆ. ಕೆಲಸಕ್ಕೆ ಸಂಬಂಧಿಸಿದ ಯಾವುದೇ ವಿಚಾರಕ್ಕೂ ಅವರೊಡನೆ ಮಾತನಾಡು. ನಿನ್ನ ಪ್ರಯೋಗಗಳನ್ನು ಮತ್ತು ಬರುವ ಫಲಿತಾಂಶಗಳನ್ನು ಅವರು ಮೊದಲು ನೋಡಿ ಚರ್ಚಿಸುತ್ತಾರೆ. ನಂತರ ನಾನು. ಟರ್ನರ್ ತನ್ನ ಅಧೀನದಲ್ಲಿದ್ದ ಪ್ರತಿಯೊಂದು ಪ್ರಾಜೆಕ್ಟಿಗೂ ಇಂತಹ ಸಹಾಯಕರನ್ನು ನೇಮಿಸಿಕೊಂಡಿದ್ದ.

ನಗುಮುಖದಿಂದ ನಯನಾಳನ್ನು ಸ್ವಾಗತಿಸಿದ ಸ್ಟೆಲ್ಲಾ ಪ್ರಯೋಗಾಲಯದಲ್ಲಿದ್ದ ಮಿಕ್ಕವರಿಗೆ ಅವಳನ್ನು ಪರಿಚಯಿಸಿದಳು. "ಇಲ್ಲಿ ಇದೇ ವೇಳೆಗೆ ಬರಬೇಕು, ಇಲ್ಲಿಯವರೆಗೆ ಇದ್ದೇ ಇರಬೇಕು ಎಂಬ ನಿರ್ಬಂಧವಿಲ್ಲ. ಯಥಾವತ್ತಾಗಿ ಕೆಲಸ ಮಾಡಿಕೊಂಡು ಹೋದರೆ ಸರಿ." ಎಂಬುದನ್ನು ಎರಡು ಬಾರಿ ಹೇಳಿದಳು.

ಒಂದು ವಾರಕ್ಕೆಲ್ಲಾ ನಯನಾ ಪ್ರಯೋಗಶಾಲೆಗೆ ಮಾರುಹೋದಳು. ಎಲ್ಲರೂ ತಂತಮ್ಮ ಕೆಲಸಗಳಲ್ಲಿ ಮಗ್ನರಾಗಿದ್ದರೂ ಹರಟೆಗೆ ಸಮಯವಿರುತ್ತಿತ್ತು. ಕಾಫಿ ಕೊಠಡಿ ಬೆಳಗ್ಗೆ ಹನ್ನೊಂದಕ್ಕೆ ತುಂಬಿಹೋಗಿರುತ್ತಿತ್ತು. ಟರ್ನರ್ ಇಲ್ಲಿಗೆ ಬಂದದ್ದೇ ಇಲ್ಲ ಎನ್ನಬಹುದು. ಅಲ್ಲಿದ್ದ ಹುಡುಗರು ಮತ್ತು ಹುಡುಗಿಯರು ಲಲ್ಲೆ ಹೊಡೆದದ್ದೇ ಹೊಡೆದದ್ದು. ಆಗಾಗ್ಗೆ ಕೇಳಿಬಂದ ಮಾತು –

"ನಾವು ಕಷ್ಟಪಟ್ಟು ಪ್ರಯೋಗ ಮಾಡಬೇಕು. ಇವನು ನಮ್ಮ ಫಲಿತಾಂಶಗಳನ್ನು ತೆಗೆದುಕೊಂಡು ಜಗತ್ತೆಲ್ಲಾ ಸಂಚಾರ ಮಾಡ್ತಾನೆ.'' ಇನ್ನಿಬ್ಬರು ಹುಡುಗಿಯರು ಸದಾ ಟರ್ನರ್ ಬಗ್ಗೆ ಮಾತಾಡುತ್ತಿದ್ದರು. ನಯನಾ ಹತ್ತಿರ ಬಂದರೆ ಮೌನತಾಳುತ್ತಿದ್ದರು. ಇವಳಿಗೆ ಅರ್ಥವಾಗಲಿಲ್ಲ. ಒಮ್ಮೆ ಸ್ಟೆಲ್ಲಾ ಒಬ್ಬಳೇ ಕಾಫಿ ಕುಡಿಯುತ್ತಿದ್ದಾಗ ವಿಚಾರಿಸಿದಳು, "ಏನಿದು? ಕೆಲವರು ವಿಲಿಯಮ್ ವಿಚಾರಾನೇ ಮಾತಾಡ್ತಾ ಇರ್ತಾರೆ?"

"ನಾನೇನು ಹೇಳಲಿ. ಅವನು ಸ್ವಲ್ಪ ಹಾಗೇನೇ. ಎಚ್ಚರದಿಂದ ಇರಬೇಕು ನೀನು. ಅವನ ಬಲೆಗೆ ಬೀಳಬಾರದು.''

ಸ್ಟೆಲ್ಲಾ ಒಮ್ಮೆಗೇ ಎಲ್ಲವನ್ನೂ ಹೇಳಲಿಲ್ಲ. ನಯನಾ ಕಾಫಿಯ ಸಮಯದಲ್ಲಿ, ಊಟದ ಸಮಯದಲ್ಲಿ ಸಿಕ್ಕಾಗ